ಬಲ್ಯಾಕ ಕೆಲ್ಸಿತ್ತೆವ್ವ' ಎಂದು ಸುಮ್ಮನಾದ. 'ನಿಮ್ ಸೌಕಾರ ಸಂಡಾಸ್ಕ ಹೊಗ್ಯಾನ, ಬರ್ರಾನ ಅಲ್ಲೇ ದಂದ್ ಕೊಟಗ್ಯಾಗ ಕುಂದ್ರು, ಬರೊದ್ ಬಂದಿದಿ ಒಂದ್ರೊಟ್ಟಿ ಉಂಡ್ ಹೊಗಕಂತಿ, ನಿಮ್ದು ಪರ್‍ಯಾಣ ಅಲ್ಲೇ ಗ್ವಾದ್ಲ್ಯಾಗ ಆದ್ನೋಡು' ಅಂತ್ಹೇಳಿ ಮನ್ಯಾಕ ನಡದ್ಳು. 'ಯಪ್ಪ ಇವ್ರು ನಮ್ಮನಿ ಒಳ್ಗ ಬಂದ್ ಕುಂದ್ರತಾರ, ನಾವ್ ಕೊಟ್ಟ ರೊಕ್ಕ ತಗೊಂಡು ಬರ್ತಾರ. ಆದ್ರ ನಮ್ನ ಯಾಕ್ ಹಿಂಗ್ ಗಬ್ಬನಾರೋ ದನಗಳ ಉಚ್ಚ್ಯಾಗ ಕುಂದ್ರಸ್ತಾರ. ಹರ್‍ಗ ನಡಿ ಯಪ್ಪ...! ನಾವು ಅವ್ರು ಮನಿಯೊಳ್ಗ ಹೋಗಮ್ಮು' ಅಂತ ಮಗ್ಲಿದ್ದ ಮಗ ಮುಖ ಗಂಟಾಕೊಂಡು ಸಿಟ್ಟಲೇ ಅಂದ.

ಅದಾs ವ್ಯಾಳ್ಯಾಕ ಬಂದ್ ಸೌಕಾರ 'ಏನ್ಲೇ ತಿಪ್ಪ್ಯಾ ಏನಂತನಲಾ ನಿನ್ನ ಮಗ, ನಿನ್ಗ ಇಷ್ಟ ಗದ್ರಿಸಿ ಮಾತಾಡ್ತಾನ, ಇವ್ನೆ ಏನ್ ಮೊನ್ನಿ ಹತ್ನೆತ್ತೆ ಚಂದ್ ಪಾಸಾಗ್ಯಾನ ಅಂತಿದ್ರೂ ಹೈಸ್ಕೂಲ್ ಷಡಕ್ಷರ ಮಾಸ್ತಾರ್.' ಮುಖ ಅರಳಿಸಿ ತಿಪ್ಪ 'ಹ್ಞೂ..! ರೀ ಯಪ್ಪಾ' 'ಅದ್ಕೆ ರಂಗಪ್ಯಾಟಿ ಅಂಬೇಡ್ಕರ್ ಸಾಲಿಗಿ ಸೇರ್‍ಸಬೇಕಂತ ಮಾಡಿನಿ, ನೀವೂ ಬಡ್ಡೆರೆ ಗಂಟ್ಟರೆ ಯಾಡ್ರುದಾಗ ಒಂದ್ ಕೊಟ್ರ ಅನೂಕುಲಾಗ್ತದ್ರಿ' ಅಂದ. ಸಿಡ್ಕ ಮುಖ ಮಾಡ್ಕೊಂಡು ಸೌಕಾರ, ಒಂದ್ಸಾರಿ ತನ್ನ ಸುತ್ತ ಕಣ್ಣಾಡ್ಸಿ 'ಎಲ್ಲಿ ರೊಕ್ಕಲೇ ತಿಪ್ಪ್ಯಾ... ಕೈಯಾಗ ಒಂದ್ರೂಪಾಯಿಲ್ಲ, ಮುಂದ್ಲರ್‍ಸ ಕೊಡ್ತಿನಿ. ಆಗ ಮಗ್ನ ಸಾಲಿ ಹಚ್ಚಕಂತಿ, ಇದೊಂದು ವರ್‍ಸ ಬೇಕಾದ್ರ ನಮ್ಮನ್ಯಾಗ ದುಡ್ಯಾಕ್ ಇರ್‍ಲಿ ಬಿಡು. ಮುಂದಿನ ವರ್‍ಸ ನೋಡಮ್ಮಂತ' ಅಂದು ಗಣೇಶ್ ಬೀಡಿ ಸೇದ್ತಾ ನಿಂತ. ಮುಖ ಕೆಳಗಾಕಿ ತಿಪ್ಪಣ್ಣ 'ಬ್ಯಾಡ್ರಿ ಯಪ್ಪಾ ಏಟ್ಟರೇ ಏಟ್ ಕೊಡ್ರಿ, ಕಾಲಿ ಕೈಲೆ ಕಳ್ಸಬ್ಯಾಡ್ರಿ'. ಸೌಕಾರ 'ಈ ಸಣ್ಣ ಜಾತಿಗಳ ಗೋಳೆ ಹಿಂಗ್ ಇರ್ತಾದ ಇವ್ರೌನ್.' ಅಂತ ಮನಸಿನ್ಯಾಗ ಅನ್ಕೋತ ಮುಡ್ಡಿ ಚ್ಯಾಟ್ಯಾಗ ಕೈ ಹಾಕಿ ಎರ್‍ಡನೂರ್ ರೂಪಾಯಿ ಕೈಯಾಗ ಇಟ್ಟವ್ನೆ ಬಚ್ಚಲ ಮನಿ ಕಡಿ ಬರ್‍ಸಲೇ ಹೆಜ್ಜಿ ಹಾಕಿದ. ಇದ್ನೆಲ್ಲ ಕಿಡ್ಕಿ ಒಳಗಿಂದಲೇ ಕೇಳಿದ ಸೌಕಾರ್‍ನ ಹೆಂಡ್ತಿ, ಊಟ ಕೊಡನೆಪ್ಪಾಗ ಬಿಸಿ ರೊಟ್ಟಿಯೊಳ್ಗ ಐದ್ನೂರ್ ರೂಪಾಯಿ ಇಟ್ಟು ಕೊಟ್ಟು, 'ತಿಪ್ಪ್ಯಾ ಮಗ್ನಿಗಿ ಚಂದ ಸಾಲಿ ಓದ್ಸು, ನನ್ಗೂ ಮಗ ಇದ್ದಿದ್ರ ಇವ್ನಷ್ಟೆ ಇರ್‍ತಿದ್ದ. ನಂಗ್ ಆ ಭಾಗ್ಯ ಕೊಡ್ಲಿಲ್ಲ ಆ ಕರಿಮಡ್ಡಿ ಸ್ವಾಮನಾಥ. ಏನ್ ಮಾಡ್ಲಿ. ಆದ್ರ ನಾ ರೊಕ್ಕೊಟ್ಟೆ ಅಂತ ನಿಮ್ ಸೌಕಾರ್‍ನ ಕಿವಿಗಿ ಗೊತ್ತ ಮಾಡ್ಬೇಡ' ಅಂತ್ಹೇಳಿ ತನ್ನ ತಲಿಮ್ಯಾಲಿನ ಇಲ್ಕಲ್ ಸಿರಿ ಸೆರ್‍ಗ ಬಾಯಿಗಿ ಒತ್ತಿ ಇಡ್ಡು, ತುಂಬಿ ಬಂದ ಕಣ್ಣಾನ್ ನೀರ್ ನೆಲ್ಕ ಬಿಳಾಕ ಬಿಡದೇ ಹೊಸ್ತಲ್ಯಾಕ ಕಾಲಾಕಿದ್ಳು.

ಗೌಡ್ಸಾನಿ ಕೊಟ್ಟ ರೊಟ್ಟಿ ಟವಲ್ದಾಗ ಸುತ್ಗೊಂಡು ಅಲ್ಲಿಂದ ಕಾಲ್ಕಿತ್ತಿದ ತಂದಿ-ಮಗ, ಸೀದ ಮನಿಗಿ ಬಂದು, ಬ್ಯಾಗ್ ರೆಡಿ ಮಾಡ್ಕೊಂಡು ಬಸ್‌ಸ್ಟ್ಯಾಂಡಿನ ಅಂಗಡಿಗಿ ಬಂದ್ರು, ಊರ್ ಮಂದೆಲ್ಲ ಸುಡ್ಗಾಡ್ ಕಡಿ ನೆಡೆದಿತ್ತು. ರೋಡ್ ಮ್ಯಾಗ್ ಹೊಂಟ್ ಮಂದಿನೆಲ್ಲ ನೋಡ್ತಾ ನಿಂತಿದದ್ದ ಪರಸಪ್ಪ ತನ್ನ ಬಸ್ಸು ಬಂದು ನಿಂತಿದ್ದು ನೋಡರ್‍ಲಿಲ್ಲ. ಯಾವಾಗ ಜಟ್ಟೆಪ್ಪ ಸೌಕಾರ್‍ನ ಅರೇಸ್ಟ ಮಾಡ್ಕೊಂಡು ಬಂದ ಪೊಲೀಸ್ರ್ ಜೀಪ್ ಹಾರ್‍ನ ಮಾಡಿತೋ, ಅವಾಗ್ ಹೌಹಾರಿ... ಓಡಿ ಪರಸಪ್ಪ ಬಸ್ ಹತ್ತಿದ. ಇನ್ನೇನ್ ಎರ್‍ಡ್ಡು ಗಾಡಿ ರೋಡ್ ದಾಟ್ಬೇಕು, ಜಗದ ಮಲ್ಲವ್ವನ ಹೆಣ್ದ ಮೆರವಣಿಗಿ ಹಲಗಿ ಗದ್ದಲ್ದಾಗ್ ಊರಗ್ಸಿ ಮುಂದ ಬಂತು. ಮಗ್ಳು ಮರೆವ್ವ ಅವ್ವವ್ವನ ಹೆಣ್ದ ತೆಕ್ಕಿಗಿ ಬಿದ್ದು ಅತ್ತುಕರ‍್ಯಾಗ, ಅಕಿ ತೊಟ್ಟ ನೀಲಿ ಜಂಪರ್ ಮ್ಯಾಲಿನ ಒಂದ್ ಗುಂಡಿ, ಗ್ವಾಡಿಗಿ ಬಡ್ಡ ಹೆಣ್ದ ಗೂಟಕ ಸಿಕ್ಕೊಂಡು ಅಲ್ಲೇ ಎಲ್ಲೋ ಉಚ್ಚಿ ಬಿದಿತ್ತು. ಉಧೋ..! ಉಧೋ..! ಅಂತ ಬಂಡಾರ ಚಲ್ಕೊತ ಬರ್‍ತಿದ್ದ ಹತ್ತಾರ್ ಹೆಣ್ಮಕ್ಕಳ ನಡುವ, ಹರೆದ್ ಹುಡ್ಗಿ ಎದಿ ಗುಂಡಿ ಇಲ್ದ, ನೀಲಿ ಜಂಪರ ಮ್ಯಾಲ ಜಿಟಿ.. ಜಿಟಿ... ಮಳ್ಯಾಗ ಹೆಜ್ಜಿ ಹಾಕ್ತಿದ್ಳು, ಅಕಿ ಕಣ್ಣೀರ್‌ಹನಿ ಮಳಿಹನಿ ಕೂಡಿ ಎದಿ ಸಂದ್ಯಾಗಿಂದ ಹರಿತ್ತಿದ್ರsss ಹೆಣದ ಮೆರವಣಿಗ್ಯಾಗ್ ನೆರದಿದ್ದ ಮಂದಿ ನೆದ್ರೆಲ್ಲ ಅದ್ರ ಮ್ಯಾಲೇನೇ... ಆದ್ರsssಮರೆವ್ವ ಅವ್ರವ್ವನ ಹೆಣ್ದ ಸವಾರಿ, ಸಾಲಿ ಕಲ್ಯಾಕಂತ ಹೊಂಟ ಪರಸಪ್ಪ ಕುಂತ ಬಸ್, ಪೊಲೀಸ್ರ ಜೀಪ್ನ ಒಂದೇ ಸಮನೇ ನೋಡಿ, ಸುಡ್ಗಾಡ್ ಕಡ್ಗಿ ಹಾಕ್ತಿದ್ದ ಮರೆವ್ವನ ಹೆಜ್ಜಿಗಳ ತಾಳ ತಪ್ಪಿದಂಗಾದ್ವು. ಕೊನಿಗಿ ಅಕಿ ಕಣ್ಣು ಊರಗ್ಸಿ ಮ್ಯಾಲಿಟ್ಟಿದ್ದ ಕೋಣದ ತಲಿಮ್ಯಾಲ ಹಾರ್‍ಯಾಡ್ತಿದ್ದ ಹದ್ದುಗಳ ಮ್ಯಾಲಿತ್ತು. ಪರಸಪ್ಪನ ಬೆನ್ನತ್ತಿ ಬಂದ ಅವ್ನ ನಾಯಿ ಕುನ್ನಿ ಮಾತ್ರ, ಮಾದ್ರಗೇರಿ ಕಡೆ ಮಾರಿ ಮಾಡಿ ಬಿದ್ದಿದ್ದ ನಾಲಿನ ಕಾಲ್ಮರಿನ ದವಡೆ ಹಲ್ಲಿಂದ ಕಡೀತಾ ಅಲ್ಲೇ ಮಲ್ಗಿತ್ತು...

●